ಪ್ರಕಟಣೆಗಾಗಿ

## ಬಸವೇಶ್ವರ ಆಸ್ಪತ್ರೆಯಲ್ಲಿ
## ಇಂಡಿಯಾನಾ ಎಸ್ಜೆಎಂ ಹಾರ್ಟ್ ಸೆಂಟರ್ ಮತ್ತು ಕ್ಯಾತ್ ಲ್ಯಾಬ್ ಆರಂಭ

ಚಿತ್ರದುರ್ಗ : ಜ. 31 - ಆಧುನಿಕ ಕಾಲದ ಆಕಸ್ಮಿಕಗಳೆಂದರೆ ಅಪಘಾತ, ಹೃದಯಾಘಾತಗಳು. ಇವುಗಳ ಬಗ್ಗೆ ಸದಾ ಎಚ್ಚರಿಕೆ ವಹಿಸಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಬಸವೇಶ್ವರ ಆಸ್ಪತ್ರೆಯಲ್ಲಿ ಮಂಗಳೂರಿನ ಇಂಡಿಯಾನಾ ಆಸ್ಪತ್ರೆಯ ಸಹಯೋಗದೊಂದಿಗೆ ಆರಂಭಿಸಲಾದ ಇಂಡಿಯಾನಾ ಎಸ್.ಜೆ.ಎಂ. ಹಾರ್ಟ್ ಸೆಂಟರ್ ಮತ್ತು ಕ್ಯಾತ್ ಲ್ಯಾಬ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಹೃದಯವು ನಮ್ಮ ಮುಖ್ಯ ಭಾಗ. ಧಾರ್ಮಿಕ ನೇತಾರರಿಗೂ ಹೃದಯಸಂಬಂಧಿ ಕಾಯಿಲೆ, ಮಧುಮೇಹ ಕಾಯಿಲೆಗಳು ಇವೆ. ಶೇ ೩೦ರಷ್ಟು ಧಾರ್ಮಿಕ ನೇತಾರರು ಮಧುಮೇಹ ಮತ್ತು ಹೃದಯಸಂಬಂಧಿ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಎಷ್ಟೇ ಶ್ರೀಮಂತ, ಮುತ್ಸದ್ಧಿ, ಯಾರೇ ಇರಲಿ ಆರೋಗ್ಯದ ಬಗ್ಗೆ ಕಾಳಜಿ ಬೇಕು. ಸ್ವಾಮಿಗಳಿಗೆ ಜೀವ ಇದೆ, ಭಾವ ಇದೆ ಎನ್ನುವುದನ್ನು ಜನರು ಮರೆಯುತ್ತಾರೆ. ಸರಿಯಾದ ಸಮಯಕ್ಕೆ ಪ್ರಸಾದ ಮಾಡಬೇಕು, ಗರ್ಭಗುಡಿಯಲ್ಲಿ ಕಿಟಕಿಗಳು ಇರುವುದಿಲ್ಲ. ಅವರು ಆರತಿ ತಟ್ಟೆ ಬೆಳಗಿ, ಕರ್ಪೂರ ಬೆಳಗಿ ಆ ಹೊಗೆಯಿಂದ ಪೂಜಾರಿಗಳು ಸತ್ತಿರುವ ಸಂದರ್ಭಗಳು ಹೆಚ್ಚಿವೆ. ಮಾನವ ಪ್ರಯತ್ನ ೯೦ರಷ್ಟು ದೇವರ ಪ್ರಯತ್ನ 10ರಷ್ಟಿರಬೇಕು. ವೈದ್ಯರು ಚಲಿಸುವ ದೇವರುಗಳು. ನಮಗೆ ಜೀವದ ಬೆಲೆ ಗೊತ್ತಾಗಬೇಕು. ಪ್ರಾಣದ ಕಾಳಜಿ ಮುಖ್ಯ. ಭಾರತೀಯರು ಶುಚಿ ಪ್ರಿಯರೇನೋ ಗೊತ್ತಿಲ್ಲ ಆದರೆ ರುಚಿ ಪ್ರಿಯರು. ಚೆನ್ನಾಗಿ ತಿನ್ನುತ್ತ ಟಿವಿ ಮುಂದೆ ಕುಳಿತು ಶರೀರವನ್ನು ದಪ್ಪವಾಗಿಸಿಕೊಂಡು ಆರೋಗ್ಯ ಕೆಡಿಸಿಕೊಳ್ಳುತ್ತಾರೆ. ನಮ್ಮ ಆಸ್ಪತ್ರೆಯಿಂದ ಉತ್ತಮ ಸೇವೆ ಕೊಡುತ್ತೇವೆ. ಅದರ ಸದುಪಯೋಗವನ್ನು ಎಲ್ಲರು ಬಳಸಿಕೊಳ್ಳಬೇಕು ಎಂದು ಹೇಳಿದರು.

ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ ಮಾತನಾಡಿ, ನಾವು ಚಿಕ್ಕವರಿದ್ದಾಗ ಹೃದಯ ಕಾಯಿಲೆಗೆ ಸಂಬಂಧಿಸಿದಂತೆ ವೆಲ್ಲೂರು ಕಡೆ ಹೋಗುತ್ತಿದ್ದರು. ಆದರೆ ಈಗ ಅದು ಜಿಲ್ಲೆಗಳಿಗೂ ಕಾಲಿಟ್ಟಿರುವುದು ಸಂತಸ. ಅಮೆರಿಕದಲ್ಲಿ ಅನೇಕ ಖ್ಯಾತ ವೈದ್ಯರು ಭಾರತೀಯರು. ಭಾರತದಲ್ಲಿ ಶೇ. ೯೦ರಷ್ಟು ಮಂದಿ ಬಡತನದಿಂದ ಕೂಡಿದ್ದಾರೆ. ಭಾರತೀಯರಿಗೆ ಆರೋಗ್ಯ ಪಾಲಿಸಿಗಳು ಬೇಕು. ಕಾರಣ ಅವರಿಗೆ ಆಸ್ಪತ್ರೆಯ ಖರ್ಚು ಭರಿಸಲು ಸಾಧ್ಯವಾಗುವುದಿಲ್ಲ. ದೇಶದಲ್ಲಿ ಆರೋಗ್ಯ ಕಾರ್ಡ್ ಗಳ ಮೂಲಕ ಆಪರೇಷನ್ಗಳು ನಡೆಯಬೇಕು. ಬಸವೇಶ್ವರ ಆಸ್ಪತ್ರೆಯಲ್ಲಿ ಡಾಕ್ಟರ್ ದೇವರಾಗಿ ಬಂದು ಒಬ್ಬ ಪೂಜಾರಿಗೆ ಹೃದಯ ಸಂಬಂಧಿ ಕಾಯಿಲೆಗೆ ಆಪರೇಷನ್ ಮಾಡಿ ಬದುಕಿಸಿದರು ಎಂಬುದೇ ಸಂತೋಷ. ಎಲ್ಲ ವರ್ಗದವರಿಗೂ ಕಡಿಮೆ ದರದಲ್ಲಿ ವೈದ್ಯಕೀಯ ಸೌಲಭ್ಯ ಸಿಗುವಂತಾಗಲಿ ಎಂದರು.

ಡಾ. ಯೂಸಫ್ ಕುಂಬ್ಳೆ ಮಾತನಾಡಿ, ನಾವು ಮೊದಲ ಬಾರಿಗೆ ಚಿತ್ರದುರ್ಗದಲ್ಲಿ ಕ್ಯಾತ್ ಲ್ಯಾಬ್ ಮಾಡಿದ್ದೇವೆ. ನನಗೆ ಇಂದು ಅತ್ಯಂತ ಸಂತಸದ ದಿನ. ಚಿತ್ರದುರ್ಗದಲ್ಲಿ ಹಲವು ರೀತಿಯ ವೈದ್ಯಕೀಯ ಚಿಕಿತ್ಸೆಗಳ ಕೊರತೆ ಇದೆ.ಕ್ಯಾತ್ ಲ್ಯಾಬ್ ಅತ್ಯಂತ

ದುಬಾರಿಯಾದುದು. ಇಲ್ಲಿ ಅತ್ಯಂತ ಬಡವರಿಗೆ ಉತ್ತಮ ಸೌಲಭ್ಯ ಒದಗಿಸಬೇಕೆಂಬ ಉದ್ದೇಶ ಇದೆ. ಇದರ ಸದುಪಯೋಗವನ್ನು ಜನರು ಪಡೆದುಕೊಳ್ಳಬೇಕು. ಬಿಪಿಎಲ್ ಕಾರ್ಡ್ ಅಥವಾ ಆರೋಗ್ಯಕ್ಕೆ ಸಂಬಂಧಿಸಿದ ಇನ್ಸೂರೆನ್ಸ್‌ಗಳು ಇದ್ದರೆ ಅವರಿಗೆ ಅನುಕೂಲವಾಗುತ್ತದೆ. 40 ವರ್ಷದವರಿಗೆ ಹೃದಯ ಕಾಯಿಲೆ ಬಂದರೆ ಉತ್ತಮ ಟ್ರೀಟ್ಮೆಂಟ್ ಕೊಟ್ಟರೆ ಮತ್ತೆ 40 ವರ್ಷ ಬದುಕಬಹುದು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಮಾತನಾಡಿ, ಬೇರೆ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ವೈದ್ಯಕೀಯ ವ್ಯವಸ್ಥೆ ತುಂಬಾ ಕಡಿಮೆ. ಜನರು ಪೊಲೀಸ್ ಸ್ಟೇಷನ್, ಕೋರ್ಟ್, ದೇವಸ್ಥಾನಕ್ಕೆ ಹೋಗದಿರಬಹುದು ಆದರೆ ಆಸ್ಪತ್ರೆಗೆ ಬರುತ್ತಾರೆ. ನಮಗೆ ಆರೋಗ್ಯ ಮತ್ತು ಶಿಕ್ಷಣ ಬಹಳ ಮುಖ್ಯ. ವೈದ್ಯರಲ್ಲಿ ಸಹ ರೋಗಿಗೆ ತಕ್ಷಣ ಸ್ಪಂದಿಸುವ ಮನೋಭಾವ ಇರಬೇಕು. ವೈದ್ಯರು ತಮ್ಮ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂದರು.

ಡಾ॥ ಸಂಜಯ್ ಅವರು ಹೃದಯಾಘಾತಕ್ಕೊಳಗಾಗಿ ನಿನ್ನೆ ದಾಖಲಾಗಿದ್ದ ದೇವಸ್ಥಾನ ಪೂಜಾರಿಗೆ ತುರ್ತುಚಿಕಿತ್ಸೆಯೊಂದಿಗೆ ಆಂಜಿಯೋಪ್ಲಾಸ್ಟ್ ಚಿಕಿತ್ಸೆ ನೀಡಿದ್ದರಿಂದ ಸಾವಿನ ದವಡೆಯಿಂದ ಜೀವಾಪಾಯದಿಂದ ಪಾರಾಗಿದ್ದಾರೆ.

ಡಾ. ಕೆ.ಎಸ್. ಸೋಮಶೇಖರ್ ಮಾತನಾಡಿದರು. ಹೃದಯರೋಗ ತಜ್ಞ ಡಾ॥ ಮಂಜುನಾಥ್, ಡಾ॥ ಸಂಜಯ್, ಡಾ॥ ವಾಗೀಶ್, ಡಾ॥ ಪಾಲಾಕ್ಷಪ್ಪ, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಆಡಳಿತ ಮಂಡಳಿ ಸದಸ್ಯರಾದ ಪಟೇಲ್ ಶಿವಕುಮಾರ್, ಶ್ರೀಮತಿ ಗಾಯತ್ರಿ ಶಿವರಾಂ, ಶ್ರೀಮತಿ ರುದ್ರಾಣಿ ಗಂಗಾಧರ್, ಶಂಕರಮೂರ್ತಿ, ಬಸವೇಶ್ವರ ಮೆಡಿಕಲ್ ಕಾಲೇಜು ಡೀನ್ ಡಾ॥ ಪ್ರಶಾಂತ್ ವೇದಿಕೆಯಲ್ಲಿದ್ದರು.

ಈ ಸಂದರ್ಭದಲ್ಲಿ ರಿಯಾಯಿತಿ ದರದಲ್ಲಿ ಹೃದಯ ಸಂಬಂಧಿ ಕಾಯಿಲೆಗಳ ಸಮುಚ್ಛಯವನ್ನು ಬಿಡುಗಡೆಗೊಳಿಸಲಾಯಿತು.

ತೋಟಪ್ಪ ಉತ್ತಂಗಿ ಪ್ರಾರ್ಥಿಸಿದರು. ಶ್ರೀಮತಿ ಅನ್ನಪೂರ್ಣ ನಿರೂಪಿಸಿದರು. ಡಾ॥ ಜೆ. ಪ್ರಶಾಂತ್ ಸ್ವಾಗತಿಸಿದರು.


ಶ್ರೀಗುರುಬಸವಲಿಂಗಾಯನಮಃ
ಎಸ್.ಜೆ.ಎಂ. ವಿದ್ಯಾಪೀಠ (ರಿ)
ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ
ಇಂಡಿಯಾನಾ-ಎಸ್.ಜೆ.ಎಂ. ಹಾರ್ಟ್‌ಸೆಂಟರ್, ಚಿತ್ರದುರ್ಗ
ಇವರ ಸಹಯೋಗದಲ್ಲಿ
ಕ್ಯಾತ್‌ಲ್ಯಾಬ್ ಉದ್ಘಾಟನಾ ಸಮಾರಂಭ
-: ದಿವ್ಯಸಾನಿಧ್ಯ-ಉದ್ಘಾಟನೆ :-
ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು, ಅಧ್ಯಕ್ಷರು, ಎಸ್.ಜೆ.ಎಂ. ವಿದ್ಯಾಪೀಠ, ಚಿತ್ರದುರ್ಗ


ಶ್ರೀಗುರುಬಸವಲಿಂಗಾಯನಮಃ
ಎಸ್.ಜೆ.ಎಂ. ವಿದ್ಯಾಪೀಠ (ರಿ)
ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ
ಇಂಡಿಯಾನಾ-ಎಸ್.ಜೆ.ಎಂ. ಹಾರ್ಟ್‌ಸೆಂಟರ್, ಚಿತ್ರದುರ್ಗ




ಎಸ್.ಜೆ.ಎಂ. ವಿದ್ಯಾಪೀಠ (ರಿ)
ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ
ಇಂಡಿಯಾನಾ-ಎಸ್.ಜೆ.ಎಂ. ಹಾರ್ಟ್‌ಸೆಂಟರ್, ಚಿತ್ರದುರ್ಗ
ಇವರ ಸಹಯೋಗದಲ್ಲಿ
ಕ್ಯಾತ್‌ಲ್ಯಾಬ್ ಉದ್ಘಾಟನಾ ಸಮಾರಂಭ
-: ದಿವ್ಯಸಾನಿಧ್ಯ-ಉದ್ಘಾಟನೆ :-
ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು, ಅಧ್ಯಕ್ಷರು, ಎಸ್.ಜೆ.ಎಂ. ವಿದ್ಯಾಪೀಠ, ಚಿತ್ರದುರ್ಗ
(ECHO)




ಎಸ್.ಜೆ.ಎಂ. ವಿದ್ಯಾಪೀಠ (ರಿ)
ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ
ಇಂಡಿಯಾನಾ-ಎಸ್.ಜೆ.ಎಂ. ಹಾರ್ಟ್‌ಸೆಂಟರ್, ಚಿತ್ರದುರ್ಗ
ಇವರ ಸಹಯೋಗದಲ್ಲಿ
ರಿಯಾಯಿತಿ ದರದಲ್ಲಿ ಹೃದಯ ತಪಾಸಣೆ
(ECHO)




ಎಸ್.ಜೆ.ಎಂ. ವಿದ್ಯಾಪೀಠ (ರಿ)
ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ
ಇಂಡಿಯಾನಾ-ಎಸ್.ಜೆ.ಎಂ. ಹಾರ್ಟ್‌ಸೆಂಟರ್, ಚಿತ್ರದುರ್ಗ
ಇವರ ಸಹಯೋಗದಲ್ಲಿ
ಕ್ಯಾತ್‌ಲ್ಯಾಬ್ ಉದ್ಘಾಟನಾ ಸಮಾರಂಭ
-: ದಿವ್ಯಸಾನಿಧ್ಯ-ಉದ್ಘಾಟನೆ :-
ಶಿವಮೂರ್ತಿ ಮುರುಘಾ ಶರಣರು, ಅಧ್ಯಕ್ಷರು, ಎಸ್.ಜೆ.ಎಂ. ವಿದ್ಯಾಪೀಠ, ಚಿತ್ರದುರ್ಗ